# ಕರ್ನಾಟಕ ಸರ್ಕಾರ

## (ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ))

## ಭಾರತ ಸರ್ಕಾರ ಮಾಹಿತಿ ಹಕ್ಕು ಅಧಿನಿಯಮ-

## 2005ರ 4(1) ಬಿ ಪ್ರಕಾರ

## 2020–21ನೇ ಸಾಲಿನ ಮಾಹಿತಿ

**ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಹಾವೇರಿ ಜಿಲ್ಲೆ,**

ಶಿವಾಜಿ ನಗರ, 3ನೇ ಕ್ರಾಸ್, ಮೌಲಾನಾ ಆಜಾದ ಅಲ್ಪಸಂಖ್ಯಾತರ ಭವನ
ಒಂದನೇ ಮಹಡಿ , ಹಾವೇರಿ–581110

Scanned with CamScanner

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ನಿಯಮಿತ
( ಕರ್ನಾಟಕ ಸರ್ಕಾರದ ಉದ್ಯಮ)
ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಹಾವೇರಿ ಜಿಲ್ಲೆ,
ಶಿವಾಜಿ ನಗರ 3ನೇ ಕ್ರಾಸ್ ಮೌಲಾನಾ ಆಜಾದ ಅಲ್ಪಸಂಖ್ಯಾತರ ಭವನ ಒಂದನೇ ಮಹಡಿ , ಹಾವೇರಿ-581110
ಇಮೇಲ್ ವಿಳಾಸ: dmkmdc.hvr@gmail.com ದೂ.ಸಂ:-08375-234114

# ಜಿಲ್ಲಾ ವ್ಯವಸ್ಥಾಪಕರ ಕಾರ್ಯಾಲಯ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,(ನಿ) ಹಾವೇರಿ ಜಿಲ್ಲೆ

ಸರ್ಕಾರದ ಅಧಿಸೂಚನೆ ಸಂ:ಸಿಆಸುಇ/74/ಮಾಹಿತಿ/2005(ವಿಭಾಗ-2)ದಿನಾಂಕ:11/08/2005ರ ಪ್ರಕಾರ ಭಾರತ ಸರ್ಕಾರವು ಇತ್ತೀಚೆಗೆ ಜಾರಿಗೆ ತರುತ್ತಿರುವ ಮಾಹಿತಿ ಹಕ್ಕು ಕಾಯಿದೆಯನ್ನು ಅನುಷ್ಠಾನಗೊಳಿಸಲು ಕೆಳಕಂಡ ಮಾಹಿತಿಯನ್ನು ಹಕ್ಕು ಮಾಹಿತಿ ಅಧಿನಿಯಮ-4(1)(ಬಿ)ರ ಉಪ ನಿಯಮಗಳನ್ನು 2021-22ನೇ ಸಾಲಿನ ಮಾಹಿತಿಗಾಗಿ ಪ್ರಕಟನೆಗೊಳಿಸಿದೆ.

ಅನುಬಂಧ-1

**Section 4(1)(b)(I)(II)**

ನಿಗಮದ ವಿವರಗಳು, ಕಾರ್ಯಗಳು ಮತ್ತು ಕರ್ತವ್ಯಗಳು

**The particulars of organization, function and duties.**

## ನಿಗಮದ ಸ್ಥಾಪನೆ:

ಕರ್ನಾಟಕ ರಾಜ್ಯಾದ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆಯು 2011ರ ಜನಗಣತಿ ಪ್ರಕಾರ ಸುಮಾರು 96.00.475 ಇದ್ದು, ಈ ಪ್ರಮಾಣವು ರಾಜ್ಯದ ಒಟ್ಟು ಜನಸಂಖ್ಯೆಯ ಶೇ.15.92 ಆಗಿರುತ್ತದೆ. ರಾಜ್ಯದಲ್ಲಿ ವಾಸಿಸುತ್ತಿರುವ ಮುಸಲ್ಮಾನರು, ಕ್ರೈಸ್ತರು, ಜೈನರು, ಭೌದ್ದರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರು ಮತೀಯ ಅಲ್ಪಸಂಖ್ಯಾತರ ವ್ಯಾಪ್ತಿಗೆ ಸೇರಿರುತ್ತಾರೆ. ಇವರಲ್ಲಿ ಬಹುಪಾಲು ಜನರು ಬಡತನದ ರೇಖೆಯ ಕೆಳಗೆ ಸುತ್ತುತ್ತಿದ್ದು, ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯು ಚಿಂತಾಜನಕವಾಗಿದ್ದು, ಅವರುಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಾರ್ಯವನ್ನು ಸರ್ಕಾರವು ಮೊದಲು ಸ್ಥಾಪಿಸಿದ್ದ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಎಂದು ಮನರ್‌ನಾಮಕರಣಗೊಂಡಿದೆ) ವಹಿಸಲಾಗಿತ್ತು.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಮತೀಯ ಅಲ್ಪಸಂಖ್ಯಾತರಿಗೆ ಸಾಲ ಸೌಲಭ್ಯವನ್ನು ಒದಗಿಸುತ್ತಿತ್ತು. ಹೀಗಿದ್ದರೂ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳುತ್ತಿದ್ದ ಯೋಜನೆಗಳು ಮತೀಯ ಅಲ್ಪಸಂಖ್ಯಾತರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಹೆಚ್ಚಿನ ಪರಿಣಾಮವನ್ನು ಬೀರುತ್ತಿಲ್ಲ ಎಂಬ ಅಂಶವನ್ನು ಗಮನಿಸಿ, ಮತ್ತು ರಾಜ್ಯದ ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮಪಡಿಸುವ ಸಲುವಾಗಿ ಹಾಗೂ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಏಕೈಕ ಉದ್ದೇಶದಿಂದ ಆಗಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ರಾಮಕೃಷ್ಣ ಹೆಗ್ಡೆಯವರ ನೇತೃತ್ವದ ಸರ್ಕಾರವು ದಿನಾಂಕ 07-02-1986 ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಎಂಬ ಪ್ರತ್ಯೇಕ ನಿಗಮವನ್ನು ಸ್ಥಾಪಿಸಿತು.

ಪು.ತಿ.ನೋ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
ಹಾವೇರಿ

Scanned with CamScanner

## ನಿಗಮದ ಉದ್ದೇಶ:

ರಾಜ್ಯದ ಮತೀಯ ಅಲ್ಪಸಂಖ್ಯಾತ ಸಮುದಾಯಗಳ ಕಡುಬಡವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಮತ್ತು ಅವರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವುದು ಹಾಗೂ ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಮುಖ್ಯ ಉದ್ದೇಶವಾಗಿದೆ.

## ಸಂಸ್ಥೆಯ ರಚನೆ:

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ರಾಜ್ಯ ಸರ್ಕಾರ ಸ್ವಾಮ್ಯದ ಉದ್ಯಮವಾಗಿದ್ದು, 1956ರ ಕಂಪನಿ ಕಾಯಿದೆಯನ್ವಯ ಸ್ಥಾಪಿಸಲ್ಪಟ್ಟಿದೆ. ನಿಗಮದ ಅಧಿಕೃತ ಬಂಡವಾಳವು ರೂ.150.00 ಕೋಟಿ ಇರುತ್ತದೆ. ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೇಲ್ವಿಚಾರಣೆಯಲ್ಲಿ ನಿಗಮವು ಕಾರ್ಯನಿರ್ವಹಿಸುತ್ತಿದೆ. ನಿಗಮದ ನೊಂದಾಯಿತ ಕಚೇರಿ ಬೆಂಗಳೂರಿನಲ್ಲಿ ಇದ್ದು, ಇದರ ಜಿಲ್ಲಾ ಕಚೇರಿಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇರುತ್ತವೆ. ನಿಗಮದ ನಿರ್ದೇಶಕರ ಮಂಡಳಿಯ ಅಧ್ಯಕ್ಷರು ಕಾರ್ಯಕಾರಿ ಮುಖ್ಯಸ್ಥರಾಗಿದ್ದು, ವ್ಯವಸ್ಥಾಪಕ ನಿರ್ದೇಶಕರು, ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಸರ್ಕಾರ ಪ್ರಾಯೋಜಿತ ಯೋಜನೆಗಳನ್ನು ನಿಗಮದ ಜಿಲ್ಲಾ ಕಚೇರಿಗಳ ಮೂಲಕ ಅನುಷ್ಠಾನಗೊಳಿಸಿ ಮತೀಯ ಅಲ್ಪಸಂಖ್ಯಾತರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾತಿಸುವುದು ನಿಗಮದ ಧ್ಯೇಯೋದ್ದೇಶವಾಗಿದೆ (Motto).

### ಜಿಲ್ಲೆಯ ತಾಲ್ಲೂಕುವಾರು/ಜಾತಿವಾರು ಮತೀಯ ಅಲ್ಪಸಂಖ್ಯಾತರರ ಜನ ಸಂಖ್ಯೆಯ ವಿವರ

| Sl NO | Name of the Taluk | Total Papulation | Muslim | Christian | Sikh | Buddhist | Jain | Total Minority Papulation | Percentege |
|---|---|---|---|---|---|---|---|---|---|
| 1 | Byadgi | 141,024 | 20,955 | 227 | 19 | 13 | 710 | 21,924 | 15.55% |
| 2 | Hirekerur | 231,115 | 36,718 | 316 | 36 | 4 | 307 | 37,381 | 16.17% |
| 3 | Hangal | 260,455 | 57,101 | 216 | 30 | 14 | 2,727 | 60,088 | 23.07% |
| 4 | Haveri | 280,362 | 49,100 | 370 | 54 | 16 | 1,372 | 50,912 | 18.16% |
| 5 | Ranebennur | 335,281 | 43,090 | 1,005 | 126 | 9 | 1,063 | 45,293 | 13.51% |
| 6 | Shiggaon/ Savanur | 349,431 | 90,963 | 272 | 154 | 12 | 3,655 | 95,056 | 27.20% |
| | **Total** | **1,597,668** | **297,927** | **2,406** | **419** | **68** | **9,834** | **310,654** | **19.44%** |

ಮು.ತಿ.ನೋ

ಜಿಲ್ಲಾ [illegible]
ಕರ್ನಾಟಕ ಅಲ್ಪ[illegible] ಅಭಿವೃದ್ಧಿ ನಿಗಮ
[illegible]

Scanned with CamScanner

# 2021-22 ನೇ ಸಾಲಿಗೆ ನಿಗಮದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಯೋಜನೆಗಳು

1. ಅರಿವು (ವಿದ್ಯಭ್ಯಾಸ ಸಾಲ) ಯೋಜನೆ.
2. ಗಂಗಾ ಕಲ್ಯಾಣ ಯೋಜನೆ
3. ಶ್ರಮಶಕ್ತಿ ಯೋಜನೆ
4. ಮೈಕ್ರೋ ಸಾಲ (ಸ್ವ ಸಹಾಯ ಗುಂಪಿನ ಮಹಿಳಾ ಸದ್ಯಸರಿಗೆ) ಮತ್ತು ಸಹಾಯಧನ ಯೋಜನೆ
5. ಮೈಕ್ರೋ ಸಾಲ (ಕೋವಿಡ್-19) ಸಾಲ ಯೋಜನೆ
6. ಪ್ರವಾಸಿ ಟ್ಯಾಕ್ಸಿ/ಗೂಡ್ಸ್ ವಾಹನ/ಆಟೋ ರಿಕ್ಷಾ ಖರೀದಿಸಲು ಸಹಾಯಧನ ಯೋಜನೆ.

## 1. ಅರಿವು (ವಿದ್ಯಭ್ಯಾಸ ಸಾಲ) ಯೋಜನೆ:-

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿರುವ ಅರಿವು ವಿಧ್ಯಾಭ್ಯಾಸ ಸಾಲ ಯೋಜನೆಯನ್ನು 2021-22 ನೇ ಸಾಲಿಗೆ ಅನ್ವಯವಾಗುವಂತೆ ಹೊಸ(ಫ್ರೇಶ್) ಮತ್ತು ನವೀಕರಣ ಪ್ರಕರಣಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ ವೈದ್ಯಕೀಯ/ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿಗಳಿಗೆ ಮಾತ್ರ ಸಾಲವನ್ನು ನೀಡಲಾಗುವುದು.

1. ಹೊಸ ಮತ್ತು ನವೀಕರಣ ಅರ್ಜಿಗಳನ್ನು ಆನ್‌ಲೈನ್ ಸಾಫ್ಟ್‌ವೇರ್ ಮೂಲಕ ಸಲ್ಲಿಸಬೇಕು.
2. ಆಯಾ ಜಿಲ್ಲಾ ಕಚೇರಿಗಳಲ್ಲಿ ಆನ್‌ಲೈನ್‌ನಲ್ಲಿ ನವೀಕರಣ ಅರ್ಜಿಗಳನ್ನು ಸಲ್ಲಿಸುವಾಗ ಹಿಂದಿನ ವರ್ಷದಲ್ಲಿ ನಿಗಮವು ಪಡೆದ ಒಟ್ಟು ಸಾಲದ ಬಾಕಿಯ 12% ಅನ್ನು ವಿದ್ಯಾರ್ಥಿಗಳು ಪಾವತಿಸಬೇಕಾಗುತ್ತದೆ.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ ವೈದ್ಯಕೀಯ/ವೃತ್ತಿಪರ ಕೋರ್ಸುಗಳಿಗೆ ಮಾತ್ರ ಸಾಲ ಸೌಲಭ್ಯ ಅನ್ವಯಿಸುತ್ತದೆ.
4. 2ಬಿ ವರ್ಗಕ್ಕೆ ಸೇರಿದ (ಆದಾಯ ಮಿತಿ ರೂ.8.00 ಲಕ್ಷಗಳನ್ನು ಮೀರಬಾರದು) ವಿದ್ಯಾರ್ಥಿಯ ಕುರಿತು ತಹಶಿಲ್ದಾರರಿಂದ ಜಾತಿ/ಆದಾಯ ಪ್ರಮಾಣೀಕರಣವನ್ನು ಸಂಸ್ಥೆಗಳು/ಕಾಲೇಜುಗಳು ಖಚಿತಪಡಿಸಕೊಳ್ಳಬೇಕು.
5. ವಿದ್ಯಾರ್ಥಿಯ ಕುಟುಂಬದ ಆದಾಯ ಮಿತಿ ರೂ.8.00 ಲಕ್ಷ ಮೀರಬಾರದು.
6. ವಿದ್ಯಾರ್ಥಿಗಳಿಗೆ ಸಾಲದ ಮೊತ್ತವನ್ನು ನಿಗಮದಿಂದ ನೇರವಾಗಿ ಡಿಬಿಟಿ ಮೂಲಕ ಕಾಲೇಜಿನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತದೆ.

ಪು.ತಿ.ನೋ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ

Scanned with CamScanner

7. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿ..ಇ.ಟಿ/ನೀಟ್) ಆಯ್ಕೆಯಾದ ಎಂ.ಬಿ.ಬಿ.ಎಸ್ ಕೋರ್ಸಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗರಿಷ್ಠ ರೂ.2.00 ಲಕ್ಷದವರೆಗೆ ಬಿಡುಗಡೆ (ಹೊಸ ಮತ್ತು ರಿನಿವಲ್ ಪ್ರಕಣಕ್ಕೆ).

8. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿ..ಇ.ಟಿ/ನೀಟ್) ಆಯ್ಕೆಯಾದ ಬಿ..ಡಿ..ಎಸ್ ಹಾಗೂ ಆಯುಶ್ ಪದವಿ ಕೋರ್ಸಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗರಿಷ್ಠ ರೂ.30.000/- ಗಳನ್ನು ಬಿಡುಗಡೆ (ಹೊಸ ಮತ್ತು ರಿನಿವಲ್ ಪ್ರಕರಣಕ್ಕೆ).

9. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿ..ಇ.ಟಿ/ನೀಟ್) ಆಯ್ಕೆಯಾದ ಅಂದರೆ ಬ್ಯಾಚುರಲ್ ಆಫ್ ಆರ್ಕಿಟೆಕ್ಟ್/ಇಂಜನಿಯರಿಂಗ್/ಟೆಕ್ನಾಲಜಿ (ಬಿ.ಇ/ಬಿ..ಟೆಕ್) ಕೋರ್ಸಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಗರಿಷ್ಠ ರೂ.30.000/-ಗಳನ್ನು ಬಿಡುಗಡೆ (ಹೊಸ ಮತ್ತು ರಿನಿವಲ್ ಪ್ರಕರಣಕ್ಕೆ).

## 2. ಗಂಗಾ ಕಲ್ಯಾಣ ಯೋಜನೆ

ಈ ಯೋಜನೆಯಡಿ 1 ಎಕರೆ 20 ಗುಂಟೆಯಿಂದ 5 ಎಕರೆ ಭೂಮಿ ಹೊಂದಿರುವ ಅಭ್ಯರ್ಥಿಗಳ ಜಮೀನಿನಲ್ಲಿ ರೂ. 1.50 ಲಕ್ಷ ಸಹಾಯಧನ ಘಟಕ ಯೋಜನಾ ವೆಚ್ಚದೊಳಗಾಗಿ ಕೊಳವೆ ಬಾವಿಯನ್ನು ಕೊರೆದು ಪಂಪಾಸೆಟ್/ಮೋಟಾರ್/ಪೂರಕ ಸಾಮಗ್ರಿಗಳನ್ನು ಪೂರೈಸಿ ನೀರಾವರಿ ಸೌಲಭ್ಯವನ್ನು ಕಲ್ಪಸಿಕೊಡಲಾಗುವುದು. ಸಹಾಯಧನ ಮೊತ್ತ ರೂ. 1.50 ಲಕ್ಷ ವನ್ನು ಹೊರತುಪಡಿಸಿ ರೂ. 50.000/- ವನ್ನು ವಿದ್ಯುತ್ ಸರಬರಾಜು ಕಂಪನಿಗೆ (ಹೆಸ್ಕಾಂ) ವಿದ್ಯುದ್ದಿಕರಣಕ್ಕೆ ಮೂಲ ಭೂತ ಸೌಕರ್ಯದ ವೆಚ್ಚಕ್ಕೆ ಭರಿಸಲಾಗುವುದು. ಅರ್ಹ ಅಭ್ಯರ್ಥಿಗಳನ್ನು ಸಂಬಂದಪಟ್ಟ ಮತ ಕ್ಷೇತ್ರಗಳ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆಮಾಡಲಾಗುವುದು.

## 3. ಶ್ರಮಶಕ್ತಿ ಯೋಜನೆ:

ಈ ಯೋಜನೆಯಡಿಯಲ್ಲಿ ವಿವಿಧ ಸಣ್ಣ ವ್ಯಾಪರವನ್ನು ಪ್ರಾರಂಭಿಸಲು/ಅಭಿವೃದ್ಧಿಗೊಳಿಸಲು ಗರಿಷ್ಠವಾಗಿ ರೂ. 50.000/- ದವರೆಗೂ ಸೌಲಭ್ಯವನ್ನು ಒದಗಿಸಲಾಗುವುದು. ಇದರಲ್ಲಿ ಶೇ. 4% ರಷ್ಟು ವಾರ್ಷಿಕ ಬಡ್ಡಿ ದರದಲ್ಲಿ ಸಾಲವಾಗಿರುತ್ತದೆ. ಉಳಿದ ಶೇ. 50% ರಷ್ಟು ಬ್ಯಾಕ್ ಎಂಡ್ ಸಹಾಯಧನವಾಗಿರುತ್ತದೆ. ಅರ್ಹ ಅಭ್ಯರ್ಥಿಗಳನ್ನು ಸಂಬಂದಪಟ್ಟ ಮತ ಕ್ಷೇತ್ರಗಳ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆಮಾಡಲಾಗುವುದು.

## 4. ಮೈಕ್ರೋ ಸಾಲ (ಸ್ವ ಸಹಾಯ ಗುಂಪಿನ ಮಹಿಳಾ ಸದ್ಯಸರಿಗೆ) ಯೋಜನೆ:

ಈ ಯೋಜನೆಯಡಿಯಲ್ಲಿ 10 ರಿಂದ 20 ಮಹಿಳಾ ಸದ್ಯಸರನ್ನು ಹೊಂದಿರುವ ಸ್ವ ಸಹಾಯ ಗುಂಪಿನ ಮಹಿಳಾ ಸದ್ಯಸರಿಗೆ ತಲಾ ರೂ. 10.000/- ಸೌಲಭ್ಯವನ್ನು ಒದಗಿಸಲಾಗುವುದು. ಇದರಲ್ಲಿ ಶೇ. 4% ರಷ್ಟು ವಾರ್ಷಿಕ ಬಡ್ಡಿ ದರದಲ್ಲಿ ಸಾಲವಾಗಿರುತ್ತದೆ. ಉಳಿದ ಶೇ. 50% ರಷ್ಟು ಬ್ಯಾಕ್ ಎಂಡ್ ಸಹಾಯಧನವಾಗಿರುತ್ತದೆ. ಅರ್ಹ ಅಭ್ಯರ್ಥಿಗಳನ್ನು ಸಂಬಂದಪಟ್ಟ ಮತ ಕ್ಷೇತ್ರಗಳ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆಮಾಡಲಾಗುವುದು.

ಪು.ತಿ.ನೋ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
ಹಾವೇರಿ

Scanned with CamScanner

**5. ಮೈಕ್ರೋ ಸಾಲ (ಕೋವಿಡ್-19) ಸಾಲ ಯೋಜನೆ:**

ಈ ಯೋಜನೆಯಡಿಯಲ್ಲಿ ಬೀದಿಯಲ್ಲಿ/ತಳುವ ಗಾಡಿಯಲ್ಲಿ ವಿವಿಧ ವ್ಯಾಪರವನ್ನು ಮಾಡುತ್ತಿರುವ ಬಿಪಿಎಲ್ ಕಾರ್ಡ ಹೊಂದಿರುವ 25 ರಿಂದ 50 ವರ್ಷ ವಯೋಮಾನದೊಳಗಿನ ಕೋವಿಡ್-19 ನಿಂದ ತೊಂದರೆಗೊಳಗಾದ ಮಹಿಳೆಯರಿಗೆ ರೂ. 10.000/- ಸೌಲಭ್ಯವನ್ನು ಒದಗಿಸಲಾಗುವುದು. ಇದರಲ್ಲಿ ರೂ. 2000/- ಸಹಾಯಧನ ಮತ್ತು ಉಳಿದ ರೂ. 8000/- ಸಾಲವಾಗಿರುತ್ತದೆ. ಅರ್ಹ ಅಭ್ಯರ್ಥಿಗಳನ್ನು ಸಂಬಂದಪಟ್ಟ ಮತ ಕ್ಷೇತ್ರಗಳ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆಮಾಡಲಾಗುವುದು.

**6. ಪ್ರವಾಸಿ ಟ್ಯಾಕ್ಸಿ/ಗೂಡ್ಸ್ ವಾಹನ/ಆಟೋ ರಿಕ್ಷಾ ಖರೀದಿಸಲು ಸಹಾಯಧನ ಯೋಜನೆ.**

ಈ ಯೋಜನೆಯಡಿಯಲ್ಲಿ ಅಗತ್ಯ ಚಾಲನಾ ಪರವಾನಿಗೆಯನ್ನು ಹೊಂದಿರುವ 18 ರಿಂದ 45 ವರ್ಷ ವಯೋಮಾನದೊಳಗಿನ ಅಭ್ಯರ್ಥಿಗಳಿಗೆ ಪ್ರವಾಸಿ ಟ್ಯಾಕ್ಸಿ/ಗೂಡ್ಸ್ ವಾಹನ/ಆಟೋ ರಿಕ್ಷಾ ಖರೀದಿಸಲು ರೂ. 75.000/- ಸಹಾಯಧನವನ್ನು ಒದಗಿಸಲಾಗುವುದು. ಪ್ರವಾಸಿ ಟ್ಯಾಕ್ಸಿ/ಗೂಡ್ಸ್ ವಾಹನದ ಎಕ್ಸ್ ಶೋರೂಂ ಬೆಲೆ (ತೆರಿಗೆ/ ಇನ್ಸೂರೆನ್ಸ್ ಹಣ ಹೊರತುಪಡಿಸಿ). ಕನಿಷ್ಠ ರೂ. 4.00 ಲಕ್ಷದಿಂದ ರೂ. 7.50 ಲಕ್ಷ ಮಿತಿಯೋಳಗಿರಬೇಕು ಹಾಗೂ ಆಟೋ ರಿಕ್ಷಾದ ಬೆಲೆ ತೆರಿಗೆಯನ್ನು ಸೇರಿಕೊಂಡತೆ ಕನಿಷ್ಠ ರೂ. 1.50 ಲಕ್ಷ ದಿಂದ ಗರಿಷ್ಠ ರೂ. 2.90 ಲಕ್ಷ ಮಿತಿಯೊಳದಿರತಕ್ಕದ್ದು. ನಿಗಮದ ಸಹಾಯಧನ ರೂ. 75.00/- ಗಳನ್ನು ಹೊರತುಪಡಿಸಿ ಉಳಿದ ಮೊತ್ತ ಬ್ಯಾಂಕಿನ ಸಾಲದ ಹಣವಾಗಿರುತ್ತದೆ. ಅರ್ಹ ಅಭ್ಯರ್ಥಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿರುವ ಆಯ್ಕೆ ಸಮಿತಿ ಅಭೆಯಲ್ಲಿ ಆಯ್ಕೆ ಮಾಡಲಾಗುವುದು.

## ಜಿಲ್ಲಾ ವ್ಯವಸ್ಥಾಪಕರ ಹಾಗೂ ಜಿಲ್ಲಾ ಕಚೇರಿಯ ಸಿಬ್ಬಂದಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳು.

### (ಎ). ಜಿಲ್ಲಾ ವ್ಯವಸ್ಥಾಪಕರು:

1. ನಿಗಮದ ಕ್ರಿಯಾ ಯೋಜನೆ ಅನ್ವಯ ವಿವಿಧ ಯೋಜನೆಗಳಡಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಿ ವ್ಯಾಕಪ ಪ್ರಕಟಣೆ/ ಪ್ರಚಾರವನ್ನು ನೀಡುವುದು.

2. ಸ್ವೀಕರಿಸಲಾದ ಅರ್ಹ ಅಭ್ಯರ್ಥಿಗಳ ಯಾದಿ ಮತ ಕ್ಷೇತ್ರವಾರು ಗುರಿಯ ವಿವರಗಳೊಂದಿಗೆ ಆಯಾ ಆಯ್ಕೆ ಸಮಿತಿಗಳಿಗೆ (ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳವರ ಆಯ್ಕೆ ಸಮಿತಿ) ನಿಗಧಿತ ಅವಧಿಯೋಳಗೆ ಮಂಡಿಸಿ, ಅರ್ಹ ಅಭ್ಯರ್ಥಿಗಳ ಆಯ್ಕೆಗೆ ಕ್ರಮ ಕೈಗೊಳ್ಳುವುದು.

3. ಜಿಲ್ಲಾ ಮಟ್ಟದಲ್ಲಿ ನಡೆಯುವ ಸಭೆಗಳಿಗೆ ಹಾಗು ಕೇಂದ್ರ ಕಚೇರಿಯಲ್ಲಿ ನಡೆಯುವ ಸಭೆಗಳಲ್ಲಿ ಹಾಜರಾಗಿ ಅಗತ್ಯ ವಿವರಗಳನ್ನು ಸಲ್ಲಿಸುವುದು.

ಪು.ತಿ.ನೋ

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
ಕೊಪ್ಪಳ

Scanned with CamScanner

4. ಯೋಜನಾವಾರು/ವರ್ಷವಾರು ಮರುಪಾವತಿಯ ಬಾಕಿ ತ:ಖ್ತೆಯನ್ನು ಸಿದ್ಧಪಡಿಸಿಕೊಂಡು, ಮರುಪಾವತಿ ಬೇಡಿಕೆ ಅನುಗುಣವಾಗಿ ಮರುಪಾವತಿ ಕಾರ್ಯಾಚರಣೆ ಸೂಕ್ತ ನಿರ್ದೇಶನ ಹಾಗೂ ಕಾರ್ಯಾಚರಣೆಯನ್ನು ಕೈಗೊಳ್ಳುವುದು.

5. ಸಿಬ್ಬಂದಿಗಳು ಯೋಜನೆಯ ಕಾರ್ಯಗತೆಗೆ ಸಂಬಂಧಿಸಿದಂತೆ ಇರುವ ಕಡತಗಳನ್ನು, ಸಾಲದ ಲೆಡ್ಜರ್‌ಗಳನ್ನು, ಸಾಲಕ್ಕೆ ಪಡೆಯಲಾದ ಅರ್ಜಿ/ದಾಖಲಾತಿ/ಭದ್ರತಾ ದಾಖಲಾತಿ, ಮರುಪಾವತಿ ರಶೀದಿ ಪುಸ್ತಗಳು, ಸಾಧಿಲ್ವಾರು ವೆಚ್ಚದ ರಶೀದಿಗಳು, ನಗದು ಪುಸ್ತಕ ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದ ಬಗ್ಗೆ ಕಾಲ ಕಾಲಕ್ಕೆ ಧೃಢೀಕರಿಸಿಕೊಳ್ಳುವುದು.

6. ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳು ಹಾಗು ಮಾನ್ಯ ಮುಖ್ಯಕಾರ್ಯನಿರ್ವಾಹಕ ಸೂಚಿಸುವ ಇತರೇ ಯಾವುದೇ ಸರ್ಕಾರಿ ಕಾರ್ಯಗಳು ನಿರ್ವಹಿಸುವುದು.

## (ಬಿ). ಸರ್ಕಾರ ಸಂಸ್ಥೆಯಾದ ಕಿಯೋನಿಕ್ಸ್ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಪಡೆದಿರುವ 03 ಸಿಬ್ಬಂದಿಗಳ ಕರ್ತವ್ಯ ಹಾಗೂ ಜವಾಬ್ದಾರಿ:

1. ಪ್ರಕಟಣೆ ಅನ್ವಯ ವಿವಿಧ ಯೋಜನೆಗಳಡಿಯಲ್ಲಿ ಪಡೆಯಾದ ಅರ್ಜಿಗಳ ದಾಖಲಾತಿಗಳನ್ನು ಪರಿಶೀಲಿಸುವುದು.

2. ಪರಿಶೀಲಸಲಾದ ಅರ್ಹ/ ಅನರ್ಹಗಳಾದ ಅಭ್ಯರ್ಥಿಗಳ ಮತ ಕ್ಷೇತ್ರಗಳವಾರು/ ಜಾತಿವಾರು ಯಾದಿಯನ್ನು ತಯಾರಿಸುವುದು

3. ಸಿಬ್ಬಂದಿಗಳು ಯೋಜನೆಯ ಕಾರ್ಯಗತೆಗೆ ಸಂಬಂಧಿಸಿದಂತೆ ಇರುವ ಕಡತಗಳನ್ನು, ಸಾಲದ ಲೆಡ್ಜರ್‌ಗಳನ್ನು, ಸಾಲಕ್ಕೆ ಪಡೆಯಲಾದ ಅರ್ಜಿ/ದಾಖಲಾತಿ/ಭದ್ರತಾ ದಾಖಲಾತಿ, ಮರುಪಾವತಿ ರಶೀದಿ ಪುಸ್ತಕಗಳು, ಸಾಧಿಲ್ವಾರು ವೆಚ್ಚದ ರಶೀದಿಗಳು, ನಗದು ಪುಸ್ತಕಗಳನ್ನು ನಿರ್ವಹಣೆ ಮಾಡುವುದು.

4. ವಿವಿಧ ಯೋಜನೆಗಳಡಿ/ ವರ್ಷವಾರು ಡಿಸಿಬಿ ತ:ಖ್ತೆಯನ್ನು ತಯಾರಿಸುವುದು.

5. ಸುಸ್ತಿದಾರರಿಗೆ ಕಾಲ ಕಾಲಕ್ಕೆ ನೋಟಿಸ್‌ಗಳನ್ನು ಜಾರಿಗೊಳಿಸುವುದು.

6. ಸುಸ್ತಿದಾರರ ಸ್ಥಳಕ್ಕೆ ಖುದ್ದಾಗಿ ಬೇಟಿ ನೀಡಿ ಮರುಪಾವತಿ ಹಣ ಸಂಗ್ರಹಣೆ ಮಾಡುವುದು ಮತ್ತು ಮರುದಿನ ಸದರಿ ಹಣವನ್ನು ಬ್ಯಾಂಕ್ ಖಾತೆಗೆ ಮಾಡುವುದು.

7. ಜಿಲ್ಲಾ ಮಟ್ಟದ/ ಕೇಂದ್ರಯ ಸಭೆಗಳಿಗೆ ಅಗತ್ಯ ವಿವರಗಳನ್ನು ತಯಾರಿಸುವುದು.

8. ಜಿಲ್ಲಾ ಕಚೇರಿಗೆ ಸಾರ್ವಜನಿಕರಿಂದ ಬರುವ ಮನವಿಗಳನ್ನು/ ಜಿಲ್ಲೆಯ ವಿವಿಧ ಇಲಾಖೆಗಳಿಂದ ಬರುವ ಪತ್ರಗಳಿಗೆ, ಕೇಂದ್ರಯಿಂದ ಬರುವ ಪತ್ರಗಳಿಗೆ, ಸರ್ಕಾರದಿಂದ ಬರುವ ಪತ್ರಗಳಿಗೆ ಇತ್ಯಾದಿ ಪತ್ರಗಳಿಗೆ ಸೂಕ್ತ ಪ್ರತ್ಯೂತ್ತರ/ ಹಿಂಬರಹ ಕರಡು ಪತ್ರಗಳನ್ನು ತಯಾರಿಸಿ ಜಿಲ್ಲಾ ವ್ಯವಸ್ಥಾಪಕರ ಅನುಮೋದನೆಯನ್ನು ಪಡೆದುಕೊಂಡು ಸಂಬಂಧಪಟ್ಟ ಮನವಿದಾರರಿಗೆ ಹಾಗೂ ಅಧಿಕಾರಿಗಳಿಗೆ ಕಳುಹಿಸುವುದು. ಈ ಕರ್ತವ್ಯದಲ್ಲಿ ಇನ್‌ವರ್ಡ್/ ಔಟವರ್ಡ ರೆಜಿಸ್ಟಗಳನ್ನು ನಿರ್ವಹಿಸುವುದು.

9. ಜಿಲ್ಲಾ ವ್ಯವಸ್ಥಾಪಕರು ಹಾಗೂ ಕೇಂದ್ರ ಕಚೇರಿಯ ಅಧಿಕಾರಿಗಳು ಸೂಚಿಸುವ ಇರತೇ ನಿಗಮದ ಕಾರ್ಯಗಳನ್ನು ನಿರ್ವಹಿಸುವುಸುದು.

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ)
ಹಾವೇರಿ

Scanned with CamScanner